# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2389 |
| ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಅತ್ಯಂತ ಹಿಂದುಳಿದ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮತ್ತು ವೇತನಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; | 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಶುಲ್ಕಪಾವತಿ ಮತ್ತು ವಿದ್ಯಾರ್ಥಿ ವೇತನ ಪಾವತಿಯಾದ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ |
| ಆ) | ಸರ್ಕಾರವು ವಿವಿಧ ಶಾಲಾ-ಕಾಲೇಜುಗಳಿಗೆ ನಿಗದಿಪಡಿಸಿದ ಶುಲ್ಕ ಮರುಪಾವತಿ ಮಾಡಲು ಕಡಿಮೆ ಹಣವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಶುಲ್ಕ ಮರುಪಾವತಿ ಕಾರ್ಯಕ್ರಮವನ್ನು ಸರ್ಕಾರದ ಆದೇಶ ದಿನಾಂಕ:-06.11.2023 ಮತ್ತು ತಿದ್ದುಪಡಿ ಆದೇಶ ದಿನಾಂಕ:-04.09.2024 ರ ಅನುಸಾರ ಅನುಷ್ಠಾನಗೊಳಿಸಲಾಗುತ್ತಿದೆ. ಈ ಆದೇಶಗಳಂತೆ ಹಿಂದುಳಿದ ವರ್ಗಗಳ ಎಲ್ಲಾ ವಿದ್ಯಾರ್ಥಿಗಳಿಗೂ ವಿಶ್ವವಿದ್ಯಾಲಯಗಳಿಂದ ನಿಗದಿಪಡಿಸಿದ ಈ ಕೆಳಕಂಡ ಶುಲ್ಕದರಗಳು ಅಥವಾ ಇಲಾಖೆಯಿಂದ ನಿಗದಿಪಡಿಸಿದ ಶುಲ್ಕದರಗಳು ಯಾವುದು ಕಡಿಮೆಯೋ ಆ ಶುಲ್ಕದರಗಳನ್ನು ಪಾವತಿಮಾಡಲಾಗುತ್ತಿದೆ.<br>1. ಬೋಧನಾ ಶುಲ್ಕ<br>2. ಗ್ರಂಥಾಲಯ ಶುಲ್ಕ<br>3. ಪರೀಕ್ಷಾ ಶುಲ್ಕ<br>4. ಕ್ರೀಡಾ ಶುಲ್ಕ<br>5. ಪ್ರಯೋಗಾಲಯ ಶುಲ್ಕ |
| ಇ) | ಪ್ರವರ್ಗ-1ರ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ಮರುಪಾವತಿ ಮಾಡದಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ; ಇದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ; | ಪ್ರವರ್ಗ-1 ರ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ SC/ST ವಿದ್ಯಾರ್ಥಿಗಳಿಗೆ ನೀಡುವ ದರಗಳಲ್ಲಿಯೇ ಶುಲ್ಕ ಮರುಪಾವತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

<table>
<tr>
<td>ಈ)</td>
<td>ಸರ್ಕಾರದ ಆಧ್ಯತಾ ವಲಯದ ಶಿಕ್ಷಣದ ಅಡಿಯಲ್ಲಿ ಈ ರೀತಿಯಲ್ಲಿ ಶುಲ್ಕವನ್ನು ಮರುಪಾವತಿಸಿ ಮಾಡದೇ ಇದ್ದಲ್ಲಿ, ಈ ಪ್ರವರ್ಗ-1 ವಿದ್ಯಾರ್ಥಿಗಳು ಶಿಕ್ಷಣವನ್ನು ಮಧ್ಯದಲ್ಲಿಯೇ ಮೊಟಕುಗೊಳಿಸಿ, ನಿರುದ್ಯೋಗಿಗಳಾಗುವುದಿಲ್ಲವೇ; ಈ ಬಗ್ಗೆಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td>
<td>ಹಿಂದುಳಿದ ವರ್ಗಗಳ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಅರ್ಹ ಪ್ರವರ್ಗ-1ರ ಎಲ್ಲಾ ವಿದ್ಯಾರ್ಥಿಗಳಿಗೂ ಸರ್ಕಾರದ ಆದೇಶದಂತೆ ಮೊದಲನೆ ಆದ್ಯತೆಯಲ್ಲಿ ಅನುದಾನ ಲಭ್ಯತೆಯನುಸಾರ ಶುಲ್ಕ ಮರುಪಾವತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳು ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿಯೂ ಸಹ ಈ ಕೆಳಕಂಡ ದರಗಳಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯಬಹುದಾಗಿರುತ್ತದೆ.
<table>
<tr><th>ಕೋರ್ಸ್ ಗ್ರೂಪ್</th><th>ವಿದ್ಯಾರ್ಥಿ ವೇತನ ದರಗಳು (ರೂ.ಗಳಲ್ಲಿ)</th></tr>
<tr><td>ಗ್ರೂಪ್ ಎ ( ವೃತ್ತಿಪರ ಪದವತಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಕೋರ್ಸ್ ಗಳು)</td><td>20000/-</td></tr>
<tr><td>ಗ್ರೂಪ್ ಬಿ (ಸ್ನಾತಕೋತ್ತರ ಪದವಿ ಮತ್ತು ಪಿನಿ ಡಿಪ್ಲೋಮಾ ಕೋರ್ಸ್‌ಗಳು )</td><td>13000/-</td></tr>
<tr><td>ಗ್ರೂಪ್ ಸಿ ( ಸಾಮಾನ್ಯ ಪದವಿ ಕೋರ್ಸುಗಳು )</td><td>8000/-</td></tr>
<tr><td>ಗ್ರೂಪ್ ಡಿ ( ಪಿಯುಸಿ ಮತ್ತು ಸಮಾನಾಂತರ ಕೋರ್ಸುಗಳು)</td><td>5000/-</td></tr>
</table>
</td>
</tr>
</table>

**ಸಂಖ್ಯೆ:ಹಿಂವಕ 304 ಬಿಂಎಂಎಸ್ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

**ಕರ್ನಾಟಕ ವಿಧಾನಪರಿಷತ್ ನ ಸದಸ್ಯರಾದ ಶ್ರೀ ಡಿ ಟಿ ಶ್ರೀನಿವಾಸ್ ( ಶಿಕ್ಷಕರ ಕ್ಷೇತ್ರ)**
**ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 2389 ಕ್ಕೆ ಅನುಬಂಧ**

2023-24,2024-25 ಮತ್ತು 2025-26 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಮತ್ತು ವಿದ್ಯಾರ್ಥಿ ವೇತನ ಪಾವತಿಯಾದ ವಿವರಗಳು

(ರೂ.ಕೋಟಿಗಳಲ್ಲಿ)

| ಯೋಜನೆಯ ಹೆಸರು | 2023-24 | | 2024-25 | | 2025-26 | |
|---|---|---|---|---|---|---|
| | ಪಾವತಿಯಾದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿ ಮಾಡಲಾದ ಅನುದಾನ | ಪಾವತಿಯಾದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿ ಮಾಡಲಾದ ಅನುದಾನ | ಪಾವತಿಯಾದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿ ಮಾಡಲಾದ ಅನುದಾನ |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | 37442 | 14.97 | 22436 | 8.97 | 22953 | 9.03 |
| ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | 34826 | 8.36 | 31658 | 8.22 | 32900 | 9.38 |
| ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 31089 | 23.92 | 17480 | 13.70 | 31620 | 23.35 |
| ಶುಲ್ಕ ಮರುಪಾವತಿ | 49948 | 33.06 | 62612 | 36.24 | 17766 | 20.80 |
| ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 14120 | 12.19 | 16484 | 14.39 | 10672 | 9.69 |
| ವಿದ್ಯಾಸಿರಿ | 4955 | 7.43 | 4633 | 6.94 | 5904 | 8.85 |
| **ಒಟ್ಟು** | **172380** | **99.93** | **155303** | **88.46** | **121815** | **81.10** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.